quickmarketreports.com Date : 10-10-2015

# ನವಮಂಗಳೂರು ಪೋರ್ಟ್ ಟ್ರಸ್ಟ್‌ನಿಂದ ಆಧುನಿಕ ಸೌಲಭ್ಯಗಳನ್ನು ಬಳಸಲು ಗೋಡಂಬಿ ವ್ಯಾಪಾರಸ್ಥರಿಗೆ ಕರೆ

ವ್ಯಾಪಾರಿಗಳ ವ್ಯಾಪಾರಿ ಸಭೆಯಲ್ಲಿ ಮಾತನಾಡುತ್ತಾ ನವಮಂಗಳೂರು ಪೋರ್ಟ್ ಟ್ರಸ್ಟ್‌ನ ಉಪ ಅಧ್ಯಕ್ಷರಾದ ಸುರೇಶ್ ಪಿ. ಯವರು ಗೋಡಂಬಿ ರಫ್ತು ಮತ್ತು ಆಮದು ವ್ಯಾಪಾರಸ್ಥರು ಬಂದರಿನಲ್ಲಿರುವ ಆಧುನಿಕ ಸೌಲಭ್ಯಗಳನ್ನು ಬಳಸಿಕೊಳ್ಳಲು ಕರೆ ನೀಡಿದರು. ನವಮಂಗಳೂರು ಬಂದರಿನಿಂದ ಪ್ರತಿ ನಾಲ್ಕು ದಿನಗಳಿಗೊಮ್ಮೆ ವೆಸೆಲ್ ಸೌಲಭ್ಯವನ್ನು ವ್ಯಾಪಾರಸ್ಥರ ಹೆಚ್ಚಿನ ಅವಶ್ಯಕತೆಗಾಗಿ ಹೆಚ್ಚಿಸಲಾಗಿದೆ. ಕಂಟೈನರ್ ಸಾಗಾಣಿಕೆ ನವಮಂಗಳೂರು ಬಂದರಿನಿಂದ 2004–05 ರಲ್ಲಿದ್ದ 943 ಟಿ.ಇ.ಯು. ನಿಂದ 2014–15ರಲ್ಲಿ 62808 ಟಿ.ಇ.ಯು.ಗೆ ಹೆಚ್ಚಿಸಲಾಗಿದೆ ಎಂದರು. ಈ ಸಮಯದಲ್ಲಿ ಸಾಗಾಣಿಕೆಯೂ 8006 ಟಿ.ಇ.ಯು.ನಿಂದ (2013–14ರಲ್ಲಿ) 2014–15ಕ್ಕೆ 13258 ಟಿ.ಇ.ಯು.ಗೆ ಹೆಚ್ಚಳವಾಗಿ 53% ಹೆಚ್ಚಳಗೊಂಡಿದೆ ಎಂದರು. ವ್ಯಾಪಾರಸ್ಥರು ತಮ್ಮ ವ್ಯಾಪಾರಾಭಿವೃದ್ಧಿಗಾಗಿ ಹೆಚ್ಚಿಸಿದ ಸೌಲಭ್ಯಗಳನ್ನು ಹೆಚ್ಚು ಬಳಸಿಕೊಳ್ಳಬೇಕೆಂದರು.

ಟ್ರಾಫಿಕ್ ಮ್ಯಾನೇಜರ್ ವೈ. ಆರ್. ಬೆಳಗಲ್, ಪ್ಲಾಂಟ್ ಕ್ವಾರೆಂಟಿಕ್ ಮ್ಯಾನೇಜರ್ ಗುಲಾಬ್ ಸಿಂಗ್, ಕರ್ನಾಟಕ ಗೋಡಂಬಿ ಕಾರ್ಖಾನೆಗಳ ಅಧ್ಯಕ್ಷ ಬೋಳ ರಾಹುಲ್ ಕಾಮತ್, ಕಲ್ಬಾವಿ ಕ್ಯಾಶ್ಯೂ ಕಾರ್ಖಾನೆಯ ಕೆ. ಪ್ರಕಾಶ್ ರಾವ್ ಸಭೆಯಲ್ಲಿ ಉಪಸ್ಥಿತರಿದ್ದರೆನ್ನಲಾಗಿದೆ.